**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ 1232/23** **ಸಿ. ಡಬ್ಲ್ಯೂ: 03**

**ಪಿ. ಡಬ್ಲ್ಯೂ: 03**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ನಾಗರಾಜು<br>ಒಡೆಯರಪ್ಪ<br>31 ವರ್ಷ<br>ಖಾಸಗಿ ಕಂಪನಿಯಲ್ಲಿ ಕೆಲಸ<br>ಬೆಂಗಳೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 17-06-2026** |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ವಕೀಲರಿಂದ:**

ಚಾಸಾ-2 ರಿಂದ 5 ನನಗೆ ಗೊತ್ತು. ಮೃತ ವ್ಯಕ್ತಿ ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿ ಮೃತರಿಗೆ ಡಿಕ್ಕಿ ಪಡಿಸಿದರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ .

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು: ಶ್ರೀ. ಎಪಿಪಿ ಯವರಿಂದ**

ದಿ: 01-05-2023 ರಂದು ನಾನು ಮತ್ತು ಆರೋಪಿ ಹಾಗೂ ಚಾಸಾ-4 ರವರು ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದರ್ಶನಕ್ಕೆ ಬಂದಿದ್ದು

ವಾಪಸ್ಸು ಊರಿಗೆ ಹೋಗಲು ನಮ್ಮ ಯಜಮಾನರು ( ಆರೋಪಿ ) ಕೆಎ-16-ಎನ್ -2689 ರ ಕಾರಿನ ಹಿಂಭಾಗ ಸೀಟಿನಲ್ಲಿ ಚಾಸಾ-4 ರವರನ್ನು ಕೂರಿಸಿಕೊಂಡು ಮುಂಭಾಗ ನನ್ನನ್ನು ಕೂಡಿಸಿಕೊಂಡು ಆರೋಪಿ ಕಾರನ್ನು ಚಾಲನೆ ಮಾಡಿಕೊಂಡು ಮೈಸೂರು ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಕಡೆಯಿಂದ ಮೈಸೂರು ಕಡೆಗೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಆಗ ಸಂಜೆ 7-15 ಗಂಟೆ ಸಮಯದಲ್ಲಿ ನಂಜನಗೂಡಿನ ರಾಣಪ್ಪ ಚೌಟ್ರಿ ಹತ್ತಿರ ಒಬ್ಬ ಅಜ್ಜಿಯು ರಸ್ತೆಯ ಅಂಚಿನಲ್ಲಿ ನಿಂತಿದ್ದು ನಮ್ಮ ಕಾರು ಬರುತ್ತಿದ್ದುದನ್ನು ನೋಡದೇ ಅಜ್ಜಿ ಅವಸರದಲ್ಲಿ ರಸ್ತೆಯನ್ನು ದಾಟಲು ಮುಂದಾದಾಗ ನಮ್ಮ ಆರೋಪಿ ಕಾರನ್ನು ವೇಗವಾಗಿ ಚಾಲನೆ ಮಾಡಿಕೊಂಡು ರಸ್ತೆ ದಾಟಲು ಹೋಗುತ್ತಿದ್ದ ಅಜ್ಜಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಡಿಕ್ಕಿ ಮಾಡಿದ ಪರಿಣಾಮ ಅಜ್ಜಿಯು ಕಾರಿನ ಮೇಲೆ ಬಿದ್ದು ಕೆಳಕ್ಕೆ ಬಿದ್ದು ಕೊಂಡರು ಎಂದರೆ ಸರಿಯಲ್ಲ. ನಂತರ ನಾವುಗಳು ನೋಡಲಾಗಿ ಅಜ್ಜಿಯ ತಲೆ, ಎಡ ಮತ್ತು ಬಲಕಾಲಿಗೆ ಮತ್ತು ಮಂಡಿಗೆ ಪೆಟ್ಟಾಗಿ ಬಲ ಕಿವಿಯಿಂದ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಆಗ ಅಲ್ಲೆ ಇದ್ದ ಇಬ್ಬರು ಹುಡುಗರು ಹಾಗೂ ಲೋಹಿತ್ (ಆರೋಪಿ ) ಪೆಟ್ಟಾಗಿರುವ ಅಜ್ಜಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಪಘಾತದಲ್ಲಿ ಪೆಟ್ಟಾಗಿದ್ದ ಅಜ್ಜಿಯ ಹೆಸರು ಈರಮ್ಮ ಎಂಬುದಾಗಿ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಕೆ ಆರ್ ಆಸ್ಪತ್ರೆಯಲ್ಲಿ ಮೃತ ಪಟ್ಟಿರುವುದಾಗಿ ತಿಳಿದು ಬಂತು ಎಂದರೆ ಸರಿಯಲ್ಲ.

ದಿ.16-05-2023 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಸದರಿ ಹೇಳಿಕೆ ಭಾಗವನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಯಿಯಿಂದ ಗುರುತಿಸಲಾದ ಭಾಗವನ್ನು ನಿಪಿ–4 ಎಂದು ಗುರುತಿಸಲಾಯಿತು.

ನಿಪಿ–4 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**